ತಿಂದ. ಎಷ್ಟೋ ವರ್ಷಗಳ ನಂತ್ರ ಒಟ್ಟಿಗೆ ಊಟ ಮಾಡುವ ಸುಖವನ್ನು ಕಂಡ. ರಾತ್ರಿ ನಿದ್ರೆ ಬಂದರೂ ಆಗಾಗ ಎಚ್ಚರವಾಗಿ ಮೊಬೈಲ್ ನೋಡುದು, ನಿಟ್ಟುಸಿರು ಬಿಟ್ಟು ಮಲಗುದು ಮಾಡ್ತಿದ್ದ. ಅದೆಷ್ಟು ಹೊತ್ತಿಗೋ ಒಳ್ಳೆಯ ನಿದ್ರೆ ಬಂತು. ಮರುದಿವಸ ಬೆಳಗ್ಗೆ ಎಚ್ಚರವಾದಾಗ ಸಾಧುಗಳು ಸ್ನಾನ ಮಾಡಿ ಹೊರಡಲು ಸಿದ್ಧರಾಗಿದ್ದರು. ಅವ ಗಡಬಡಿಸಿ ಎದ್ದ. 'ಏನಪ್ಪಾ ತಮ್ಮಾ... ಏನು ನಿರ್ಧಾರ ಮಾಡಿದೀ?' ಅಂತ ಸಾಧು ಕೇಳಿದ. ದಯಾನಂದ, 'ಸಾಧುಗಳೇ ಇನ್ನು ನಾನು ಕೂಡಾ ನಿಮ್ಮ ಒಟ್ಟಿಗೇ...' ಅಂತ ಕಣ್ಣಲ್ಲಿ ನೀರು ತುಂಬಿಕೊಂಡು ಹೇಳಿದ. ಅದಕ್ಕೆ ಅವ, 'ನೋಡು ತಮ್ಮಾ ಇದೆಲ್ಲ ಬದುಕಿನ ಪಾಠಗಳು. ಅದಕ್ಯಾಕೆ ಕಣ್ಣಲ್ಲಿ ನೀರು ತುಂಬಿಕೊಳ್ತೀ? ನಾವು ಇಲ್ವೇನು? ಬಾ ನಮ್ಮ ಜೊತೆಗೆ. ಆದ್ರೆ ಒಂದು ಶರತ್ತು. ನಮ್ಮಲ್ಲಿ ಏಕವಚನಾನೆ. ಬಹುವಚನ ಇಲ್ಲ. ನೀನು ಇನ್ನು ಮುಂದೆ ದಯಾ ಮಹಾರಾಜ್. ಎಲ್ಲಾನೂ ಸಮಾನವಾಗಿ ಹಂಚಿಕೊಳ್ಬೇಕು. ಕಳೆದು ಹೋದದ್ದರ ಬಗ್ಗೆ ಆಗ್ಲೀ ಅಥವಾ ನಮ್ಮ ವೈಯಕ್ತಿಕ ವಿಷಯದ ಬಗ್ಗೆಯಾಗ್ಲೀ ಕೇಳಕೂಡದು. ನಮಿಗೆ ಆ ದೇವ್ರು ಈ ದೇವ್ರು ಅಂತ ಇಲ್ಲ. ಮಂದಿರ, ಮಸೀದಿ, ದರಗಾ, ಚರ್ಚು ಎಲ್ಲಾದ್ರೂ ಸರಿ ನಮಗೆ. ಇದಕ್ಕೆ ಒಪ್ಪಿಗೇನಾ?' ಅಂತ ಕೇಳಿದ. ದಯಾನಂದ ಒಪ್ಪಿಗೆ ಇದೆ ಅಂದ. 'ಸರಿ ಹಾಗಾದ್ರೆ ಸ್ನಾನ ಮಾಡಿ ಹೊರಡು ಅಂದ. ದಯಾನಂದ ಹಾಗೇ ತಯಾರಾದ. ಸಾಧುಗಳ ಜೊತೆ ಹೊರಟ. ಒಬ್ಬ ಏಕತಾರಿ ಮಿಡಿಯುತ್ತಿದ್ದ. ಉಳಿದವರು ಹಾಡುತ್ತಿದ್ದರು. ದಯಾನಂದನಿಗೆ ಹಾಡಿನೊಂದಿಗೆ ಸೇರಿಕೊಳ್ಳಲು ಆಗುತ್ತಲೇ ಇರಲಿಲ್ಲ. ಆಗಾಗ ಜೋಳಿಗೆಯ ಒಳಗೆ ಕೈ ಹಾಕಿ ಮೊಬೈಲ್ ತೆಗೆದು ನೋಡುದು ಮತ್ತೆ ಇಡುದು ಮಾಡ್ತಿದ್ದ.

'ಏನು ದಯಾ ಮಹಾರಾಜ್ ಏನು ನೋಡ್ತಾ ಇದ್ದೀ?'

'ಏನಿಲ್ಲ ಮಹಾರಾಜ್. ನನ್ನ ತಮ್ಮ ಏನಾದ್ರೂ ನಾನು ಎಲ್ಲಿ ಅಂತ ಗಾಬರಿಯಾಗಿ ಕಾಲ್ ಮಾಡ್ತಾನಾ ಅಂತ ನೋಡ್ತಾ ಇದ್ದೆ.'

'ನೋಡು... ನಿಂಗೆ ಇನ್ನೂ ಮೋಹ ಬಿಟ್ಟಿಲ್ಲ. ಆ ದರಿದ್ರ ಮೊಬೈಲನ್ನು ಬಿಸಾಡು. ಆಗ ಎಲ್ಲದ್ರಿಂದ ಮುಕ್ತಿ ಸಿಕ್ಕಿ ಎಲ್ಲ ನಿರಾಳ ಆಗ್ತದೆ' ಅಂದ.

ದಯಾನಂದ ಜೋಳಿಗೆಯಲ್ಲಿ ಇದ್ದ ಮೊಬೈಲನ್ನು ಪಕ್ಕದಲ್ಲಿಯೇ ಇದ್ದ ತೋಡಿಗೆ ಬಿಸಾಡಿದ. ಕೆಲವು ಹೆಜ್ಜೆಗಳನ್ನು ನಡೆಯುವಾಗ ಎಲ್ಲವನ್ನೂ ಕಳಕೊಂಡ ನಿರಾಳ ಭಾವ ಮೂಡಿತು. ಸಾಧುಗಳೆಲ್ಲ,

'ಆದದ್ದೆಲ್ಲ ಒಳಿತೇ ಆಯಿತು
ನಮ ಶ್ರೀಧರನ ಸೇವೆಗೆ
ಸಾಧನ ಸಂಪತ್ತಾಯಿತ್ತು'
ಅಂತ ಹಾಡ್ತಾ ಇದ್ರೆ ಇವನ ದನಿಯೂ ಅದಕ್ಕೆ ಸೇರಿತು.

**ಪಿ.ಬಿ. ಪ್ರಸನ್ನ**

ದಕ್ಷಿಣ ಕನ್ನಡ ಜಿಲ್ಲೆಯ ಹಳೆಯಂಗಡಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸಹ ಪ್ರಾಧ್ಯಾಪಕರು. 'ಗಣಪ ಮತ್ತು ಗಾಂಪ', 'ಮಣ್ಣಿಂದ ಕಾಯ', 'ತನುವಿನೊಳಗೆ ಹುಸಿತುಂಬಿ' ಹಾಗೂ 'ಉರಗವೇಣಿಯರೆಲ್ಲ ಕೇಳಿ' ಎಂಬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಹಾಸ್ಯಪ್ರಬಂಧಗಳ ಸಂಕಲನ ಹಾಗೂ ಕವನ ಸಂಕಲನ ಪ್ರಕಟವಾಗಿವೆ.